ತುಂಬಿರಬಹುದೇನೋ!" ಅವನು ಹೇಳಿದ. ನಾನು ಬೋಗುಣಿಯೊಳಗೆ ಬ್ರಶ್ ಆಡಿಸುತ್ತಲೇ ಇದ್ದೆ.

"ಏನೇ ಹೇಳು, ನಮ್ಮ ಕಾರ್ಯಾಚರಣೆ ವ್ಯರ್ಥವಾಗಲಿಲ್ಲ ಎಂದೇ ಹೇಳಬೇಕು. ಅವರ ನಾಯಕರೆಲ್ಲಾ ಸಿಕ್ಕಿಬಿದ್ದರು. ಕೆಲವರು ಹೆಣಗಳಾಗಿ, ಮತ್ತಷ್ಟು ಜನ ಜೀವಂತವಾಗಿ! ಅವರೂ ಜೀವಂತವಾಗೇನು ಉಳಿಯುವುದಿಲ್ಲ ಬಿಡು."

"ಒಟ್ಟು ಎಷ್ಟು ಜನ ಸರ್?"

"ಹದಿನಾಲ್ಕು. ಕಾಡಿನೊಳಗೆ ತುಂಬಾ ಒಳಗೆ ಹೋಗಬೇಕಾಯಿತು. ಅವರಿಗೆ ತಕ್ಕ ಶಾಸ್ತಿಯಾಗುತ್ತದೆ. ಒಬ್ಬನೂ ತಪ್ಪಿಸಿಕೊಳ್ಳಲಾರ!"

ನೊರೆ ತುಂಬಿದ ನನ್ನ ಬ್ರಶ್ಶನ್ನು ಕಂಡೊಡನೇ ಅವನು ಕುರ್ಚಿಗೆ ಆರಾಮಾಗಿ, ಕಾಲುಗಳನ್ನು ನಿಡಿದಾಗಿ ಚಾಚುತ್ತಾ ಒರಗಿಕೊಂಡು ಕಣ್ಣು ಮುಚ್ಚಿದ. ನಾನು ಅವನಿಗಿನ್ನೂ ಹೊದಿಕೆಯನ್ನು ಹೊಚ್ಚಿರಲಿಲ್ಲ. ನಾನು ಗೊಂದಲದಲ್ಲಿದ್ದೆ. ಬೀರುವಿನಿಂದ ಹೊಚ್ಚ ಹೊಸ ಹೊದಿಕೆಯನ್ನು ಹೊರತೆಗೆದು ನನ್ನ ಗಿರಾಕಿಯ ಕುತ್ತಿಗೆಯ ಸುತ್ತ ಕಟ್ಟಿದೆ. ಅವನು ಬಡಬಡಿಸುತ್ತಲೇ ಇದ್ದ. ನಾನು ಈಗಿನ ಸರಕಾರದ ಪರ ಇರಬೇಕೆಂದು ಅವನು ಭಾವಿಸಿದ್ದನೇನೋ?

"ಮೊನ್ನೆಯ ಘಟನೆಯಿಂದ ಜನ ಭಯಭೀತರಾಗಿರಬೇಕು." ಅವನು ಹೇಳಿದ.

"ಹೌದು, ಸರ್." ನಾನೆಂದೆ, ಅವನ ಕುತ್ತಿಗೆಗೆ ಹೊದಿಕೆಯ ಗಂಟು ಕಟ್ಟುತ್ತಾ. ಅವನು ಬೆವರು ವಾಸನೆ ಹೊಡೆಯುತ್ತಿದ್ದ.

"ಮಸ್ತ್ ಪ್ರದರ್ಶನ ಅಲ್ವೇನಯ್ಯಾ?"

"ಸೂಪರ್ ಸರ್." ನಾನೆಂದೆ, ನನ್ನ ಗಮನವನ್ನು ಬ್ರಶ್‌ನೆಡೆಗೆ ಹರಿಸುತ್ತಾ. ಅವನು ಬ್ರಶ್ಶಿನ ಹಿತಕರವಾದ ಸ್ಪರ್ಶವನ್ನು ಎದುರು ನೋಡುತ್ತಾ ಕಣ್ಣುಮುಚ್ಚಿಕೊಂಡ. ಅವನು ನನಗೆ ಇಷ್ಟೊಂದು ಸನಿಹದಲ್ಲಿ ಸಿಗುತ್ತಾನೆಂದು ನಾನು ಯಾವತ್ತೂ ಊಹೆ ಮಾಡಿರಲಿಲ್ಲ. ಯಾವತ್ತು ಅವನು ನೇಣುಗಂಬಗಳನ್ನೇರಿದ್ದ ನಮ್ಮ ನಾಲ್ವರು ಕ್ರಾಂತಿಕಾರಿಗಳ ಶವಗಳನ್ನು ಶಾಲಾ ಮೈದಾನದಲ್ಲಿ ಪ್ರದರ್ಶನಕ್ಕಿಟ್ಟು ಜನರು ಸರತಿ ಸಾಲಿನಲ್ಲಿ ಬಂದು ನೋಡಿಹೋಗಬೇಕೆಂದು ವ್ಯವಸ್ಥೆ ಮಾಡಿದ್ದನೋ ಆವತ್ತಿನಿಂದ ಅವನು ನನ್ನ ಎದುರಾಳಿಯಾಗಿದ್ದ. ಆದರೂ, ನಮ್ಮ ಕ್ರಾಂತಿಕಾರಿ ಹುಡುಗರ ಛಿದ್ರ ವಿಚ್ಛಿದ್ರ ಹೆಣಗಳನ್ನು ನೋಡಿ ಘಾಸಿಗೊಂಡಿದ್ದ ನಾನು ಅಂದು ಅವನನ್ನು ಅಷ್ಟೊಂದು ಸೂಕ್ಷ್ಮವಾಗಿ ಗಮನಿಸಿರಲಿಲ್ಲ. ವಿಧಿಯಾಟ ಬಲ್ಲವರಾರು. ಅದೇ ಮನುಷ್ಯ ಇವತ್ತು ತನ್ನ ಕುತ್ತಿಗೆಯನ್ನೊಡ್ಡಿ ನನ್ನೆದುರು ಕುಳಿತುಕೊಂಡಿದ್ದಾನೆ! ಅದೇನೂ ಅಂತಹ ಅಸಹ್ಯಕರ ಮುಖವಾಗಿರಲಿಲ್ಲ. ಅಡ್ಡಾದಿಡ್ಡಿ ಬೆಳೆದಿದ್ದ ಗಡ್ಡ ಅವನ ರೂಪವನ್ನು, ವಯಸ್ಸನ್ನು ಕೊಂಚ ಮರೆಮಾಡಿತ್ತಷ್ಟೇ. ಅವನ ಹೆಸರು ಟೋರೆಸ್. ಕ್ಯಾಪ್ಟನ್ ಟೋರೆಸ್. ನಾನು ಅವನ ಕೆನ್ನೆಗಳ ಮೇಲೆ ಸಾಬೂನಿನ ನೊರೆಯನ್ನು ಹಚ್ಚತೊಡಗಿದೆ.

"ನನಗೆ ಒಂದು ಸಣ್ಣ ನಿದ್ದೆ ಮಾಡಬೇಕೆಂದೆನಿಸುತ್ತದೆ. ಆದರೆ ಸಂಜೆಯ ಕೆಲಸಗಳನ್ನು ನೆನೆದರೆ..." ಎಂದ ಆಕಳಿಸುತ್ತಾ.

ಸೋಪು ಹಚ್ಚುವುದನ್ನು ಕ್ಷಣಕಾಲ ನಿಲ್ಲಿಸಿ ನಾನು ನಿರ್ಭಾವುಕ ದನಿಯಲ್ಲಿ ಕೇಳಿದೆ, "ಮತ್ತೊಂದು ಪ್ರದರ್ಶನನಾ ಸರ್?"

"ಹಾಗೇ ಅಂದುಕೊ!"

"ಎಲ್ಲರೂ?"

"ಇಲ್ಲ, ಕೆಲವರಿಗೆ ಮಾತ್ರ." ನಾನು ಸೋಪು ಹಚ್ಚುವುದನ್ನು ಮುಂದುವರೆಸಿದೆ. ನನ್ನ ಕೈಗಳು ಮತ್ತೊಮ್ಮೆ ಕಂಪಿಸತೊಡಗಿದವು. ನನ್ನ ಅದೃಷ್ಟಕ್ಕೆ ಅದು ಅವನ ಗಮನಕ್ಕೆ ಬರಲಿಲ್ಲ. ಅವನು ಇಂದು